ಬಂಧಿಸಲಾಗುತ್ತಿದೆ. ಭಿಕ್ಷಾಟನೆ ಒಂದು ಸಾಮಾಜಿಕ ಪಿಡುಗಾಗಿದ್ದು, ಭಿಕ್ಷಾಟನೆಗೆ ಉತ್ತೇಜನವನ್ನು ನೀಡಬಾರದೆಂಬುದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕರ ಪತ್ರಗಳನ್ನು ವಿತರಿಸಲಾಗುತ್ತಿದೆ. ಹಾಗೂ ವಾಹನಗಳ ಮೇಲೆ ಬ್ಯಾನರ್‌ಗಳ ಮುಖಾಂತರ ಮತ್ತು ಧ್ವನಿವರ್ಧಕ ಮುಖಾಂತರ ಅರಿವು ಮೂಡಿಸಲಾಗುತ್ತಿದೆ. ಹಾಗೂ ಚಿತ್ರ ಮಂದಿರಗಳಲ್ಲಿ ಸ್ಲೈಡ್ಸ್‌ಗಳ ಮುಖಾಂತರ ನಿರ್ಬಂಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

4) ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ಹಾಗೂ ಕರ್ನಾಟಕ ಭಿಕ್ಷಾಟನಾ ನಿಷೇಧ ನಿಯಮ 1975 ಈ ಕಾಯಿದೆಯ ಮತ್ತು ನಿಯಮಗಳನ್ವಯ ಕೇಂದ್ರ ಪರಿಹಾರ ಸಮಿತಿಯ ಕಾರ್ಯದರ್ಶಿ ಹಾಗೂ ಇದರಡಿಯಲ್ಲಿ ಬರುವ ನಿರಾಶ್ರಿತರ ಪರಿಹಾರ ಕೇಂದ್ರಗಳ ಅಧೀಕ್ಷಕರುಗಳು ಅಲ್ಲದೆ ಆರಕ್ಷಕ ಇಲಾಖೆಯ ಅಧಿಕಾರಿಗಳು ಹಾಗೂ ಎಲ್ಲಾ ನಗರಪಾಲಿಕೆ, ನಗರ ಸಭೆಗಳ ಆಯುಕ್ತರು, ಪುರಸಭೆಗಳ ಮತ್ತು ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳು, ಇವರುಗಳಿಗೆ ಭಿಕ್ಷುಕರನ್ನು ಬಂಧಿಸುವ ಅಧಿಕಾರವಿರುತ್ತದೆ. ಹೀಗೆ ಬಂಧಿಸಲ್ಪಡುವ ಭಿಕ್ಷುಕರಿಗೆ (ನಿರಾಶ್ರಿತರಿಗೆ) ಪರಿಹಾರ ನೀಡುವ ಅಧಿಕಾರವು ಕೇಂದ್ರ ಪರಿಹಾರ ಸಮಿತಿ ಮತ್ತು ಇದರಡಿಯಲ್ಲಿ ಬರುವ ನಿರಾಶ್ರಿತರ ಪರಿಹಾರ ಕೇಂದ್ರಗಳಿಗೆ ಒಳಪಟ್ಟಿರುತ್ತದೆ.

5) ಇಲ್ಲ ಉದ್ಭವಿಸುವುದಿಲ್ಲ

ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರದ ನೆರವು.

1944(2488)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಕೇಂದ್ರಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಯೋಜನೆ ಹಾಗೂ ಯೋಜನೇತರ ಬಾಬ್ತುಗಳಲ್ಲಿ ಬಂದಿರುವ ಹಣವೆಷ್ಟು? ವಿವರ ನೀಡುವುದು.

ಆ) ಈ ವರ್ಗಗಳ ಕಲ್ಯಾಣ ಸಾಧಿಸಲು ಕಳೆದ 3 ವರ್ಷಗಳಲ್ಲಿ ರಾಜ್ಯ ಸರ್ಕಾರ ನಿಗಧಿಪಡಿಸಿರುವ ಮೊತ್ತ ಎಷ್ಟು?

ಇ) ಕೇಂದ್ರ ಸರ್ಕಾರದಿಂದ ಬಂದ ಹಣದಲ್ಲಿ ಎಷ್ಟು ಹಣವನ್ನು ಈವರೆಗೆ ಖರ್ಚು ಮಾಡಲಾಗಿದೆ; ಖರ್ಚು ಮಾಡದೆ ಉಳಿದಿರುವ ಹಣ ಎಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 1) **ಹಿಂದುಳಿದ ವರ್ಗಗಳ ಇಲಾಖೆ**

ಕಳೆದ 3 ವರ್ಷಗಳಲ್ಲಿ ಯೋಜನೆ ಹಾಗು ಯೋಜನೇತರ ಬಾಬ್ತುಗಳಲ್ಲಿ ಬಂದಿರುವ ಒಟ್ಟು ಹಣ ರೂ.906.82 ಲಕ್ಷಗಳು (ವಿವರಗಳನ್ನು ಅನುಬಂಧ 1ರಲ್ಲಿ ಒದಗಿಸಿದೆ).

2) **ಅಲ್ಪಸಂಖ್ಯಾತರ ಇಲಾಖೆ**

ಕೇಂದ್ರ ಸರ್ಕಾರದಿಂದ ಯಾವುದೇ ಹಣ ಬಂದಿರುವುದಿಲ್ಲ.

ಆ) **ಹಿಂದುಳಿದ ವರ್ಗಗಳ ಇಲಾಖೆ**

1998-99	8639.36
1999-2000	9466.59
2000-2001	1,0806.73

ಅಲ್ಪಸಂಖ್ಯಾತರ ಇಲಾಖೆ

1998-99	728.00
1999-2000	1040.15
2000-2001	1263.40

ಇ) **ಹಿಂದುಳಿದ ವರ್ಗಗಳ ಇಲಾಖೆ**

ಕೇಂದ್ರ ಸರ್ಕಾರದಿಂದ ಮಂಜೂರಾದ ಒಟ್ಟು ರೂ.906.82 ಲಕ್ಷಗಳಲ್ಲಿ ರೂ.834.485 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು, ರೂ.68.335 ಲಕ್ಷ ಬಾಕಿ ಇರುತ್ತವೆ.

ಅಲ್ಪಸಂಖ್ಯಾತರ ಇಲಾಖೆ

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೨೪೮೮ಕ್ಕೆ ಅನುಬಂಧ-೧

ಹಿಂದುಳಿದ ವರ್ಗಗಳ ಇಲಾಖೆ

ಕೇಂದ್ರ ಸರ್ಕಾರದಿಂದ ಮಂಜೂರಾದ ವಿವರಗಳು.

ಕ್ರ. ಸಂ.	ಕಾರ್ಯಕ್ರಮದ ಹೆಸರು	1999-2000	2000-2001	ಒಟ್ಟು
1.	ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣ.	78.26	183.23	261.49
2.	ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ (ನಿಲಯಾರ್ಥಿಗಳು)	-	405.99	405.99
3.	ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ (ನಿಲಯಾರ್ಥಿಗಳು)	128.62	110.72	239.34
	ಒಟ್ಟು	206.88	699.94	906.82